

# ನೋಡು ಬಾರಾ ನಕುರು ಸರೋವರ!



ಕೆಲವು ಸರೋವರಗಳು ತಿಳಿನೀಲಿ ಬಣ್ಣದ ನೀರಿನಿಂದ ಆವೃತ್ತವಾಗಿ ನೋಡುಗರಲ್ಲಿ ನವಿರಾದ ಭಾವನೆಗಳನ್ನು ಮೂಡಿಸುವಂತಿರುತ್ತವೆ, ಇನ್ನೂ ಕೆಲವು ಸರೋವರಗಳು ನೀರಿನ ತುಂಬ ಕಮಲದ ಹೂವುಗಳನ್ನು ತುಂಬಿ ಕಣ್ಣಿಗೆ ತಂಪು ನೀಡಿದರೆ, ಕೀನ್ಯಾದಲ್ಲಿರುವ ನಕುರು ಸರೋವರ, ಫ್ಲೆಮಿಂಗೊ ಪಕ್ಷಿಗಳಿಂದ ಆವೃತ್ತವಾಗಿ ಮತ್ತಷ್ಟು ಮೋಹಕವಾಗಿ ಕಾಣುತ್ತಿದೆ.

ಲೇಕ್ ನಕುರು ಸರೋವರ ಕೀನ್ಯಾದ ರಾಜಧಾನಿ ನೈರೋಬಿಯಿಂದ 157 ಕಿ .ಮೀ ದೂರದಲ್ಲಿದ್ದು ಹೆಸರಾಂತ ಸಿಹಿನೀರಿನ ಸರೋವರವಾಗಿದೆ. ಸುಮಾರು 10000 ವರ್ಷಗಳ ಹಿಂದೆಯೇ ಈ ಆಳವಾದ ಸರೋವರ ಉಗಮವಾಗಿದ್ದು, ಕಾಲಾಂತರದಲ್ಲಿ ವಾತಾವರಣದ ವೈಪರೀತ್ಯದಿಂದ ನಿರ್ಜಲೀಕರಣಗೊಳ್ಳುತ್ತ ನಕುರು, ಎಲಿಮೆನ್ಟಿಯಾ ಹಾಗೂ ನೈವಾಶ ಎಂಬ ಮೂರು ಸರೋವರಗಳಾದುವಂತೆ.

ಇದು ನೊರೆಯುಕ್ಕುವ ಸಿಹಿನೀರಿನ ಸರೋವರವಾಗಿದ್ದು ತನ್ನಲ್ಲಿರುವ ಕ್ಷಾರೀಯ ಗುಣದಿಂದ ಹಾಗೂ ಆಲ್ಗೆಗಳಿಂದ ಸಮೃದ್ಧವಾಗಿರುವುದರಿಂದ ಮಿಲಿಯಗಟ್ಟಲೆ ಫ್ಲೆಮಿಂಗೋ ಪಕ್ಷಿಗಳನ್ನು ಆಕರ್ಷಿಸುತ್ತದೆ. ಇಲ್ಲಿ ಸಿಹಿನೀರಿನಲ್ಲಿ ವಾಸಿಸುವ ಮೀನುಗಳಾದ ಬ್ಲಾಕ್ ಬಾಸ್, ಕ್ರೇಫಿಶ್ ಹಾಗೂ ಮೀನುಗಳನ್ನು ತಿನ್ನುವ ಜೀವಿಗಳಾದ ಹಿಪ್ಪೋ, ಪೆಲಿಕನ್, ಕಿಂಗ್‌ಫಿಶರ್ ಮತ್ತು ಹದ್ದುಗಳೂ ವಾಸಿಸುತ್ತವೆ.

ರಾಷ್ಟ್ರೀಯ ಅಭಯಾರಣ್ಯವೂ ಸನಿಹದಲ್ಲಿದ್ದು ಲೇಕ್ ನಕುರುವು ಫ್ಲೆಮಿಂಗೋಗಳ ಆವಾಸ ಸ್ಥಾನವಾಗಿರುವುದರಿಂದ ಇಲ್ಲಿ ಈಜಲು ಅನುಮತಿ ಇಲ್ಲ. ಜೈವಿಕ ಪರಿಸರದ ಮೇಲಿನ ಮಾನವನ ಹಸ್ತಕ್ಷೇಪ ಹಾಗೂ 2014ರ ನಂತರ ನೀರಿನ ಹರಿವಿನಲ್ಲಾದ ಹೆಚ್ಚಳದಿಂದ ಫ್ಲೆಮಿಂಗೊ ಸಂತತಿ ನಿಧಾನವಾಗಿ ನಶಿಸುತ್ತಿದೆ ಹಾಗೂ ಇವು ತಮ್ಮ ಉಳಿವಿಗಾಗಿ ಮತ್ತೊಂದು ಸುರಕ್ಷಿತ ಪ್ರದೇಶ ಅರಸಿಕೊಂಡು ಹೊರಟಿವೆ. ಸಾಮಾನ್ಯವಾಗಿ ಮಳೆಗಾಲ ಮುಗಿದ ನಂತರ ಇಲ್ಲಿ ಆಲ್ಗೆಗಳನ್ನು ತಿನ್ನಲು ಫ್ಲೆಮಿಂಗೋಗಳು ಹೆಚ್ಚಾಗಿ ಬರುವುದರಿಂದ ಜೂನನಿಂದ ಆಗಸ್ಟ್‌ವರೆಗೆ ಇಲ್ಲಿಗೆ ಭೇಟಿ ಕೊಡಲು ಸಕಾಲ.

■ ಗೀತಾ ಹೆಗಡೆ, ಬಿಸ್ಲಕೊಪ್ಪ